

ಉಪನ್ಯಾಸಕರಿಗೆ ಅವನ ಮನೆಯವರಿಗೆ ತಿಳಿಸಿ ಹೇಳುವಂತೆ ಹೇಳಿದೆ.

ಮೇಲಿನ ಈ ಮೂರು ಘಟನೆಗಳು ದಕ್ಷಿಣ ಕನ್ನಡದ ಒಂದು ಊರಿನಲ್ಲಿ ನನಗೆ ಅನುಭವಕ್ಕೆ ಬಂದಿರುವಂಥವು. ಈ ಘಟನೆಗಳು ಪರೀಕ್ಷೆಯೊಂದಿಗೆ ತಳಕು ಹಾಕಿಕೊಂಡ ಅಂಕಗಳು, ಫಲಿತಾಂಶ ಉಂಟುಮಾಡುವ ಗೊಂದಲಗಳು, ವಿದ್ಯಾರ್ಥಿಗಳು ಒತ್ತಡಕ್ಕೆ ಒಳಗಾಗುವ ರೀತಿ ಇವನ್ನೆಲ್ಲ ತೋರಿಸುತ್ತವೆ.

ಏಪ್ರಿಲ್ ಹತ್ತರಂದು ಸಾಮಾನ್ಯವಾಗಿ ಒಂಬತ್ತನೇ ತರಗತಿಯವರೆಗಿನ ಫಲಿತಾಂಶ ಪ್ರಕಟಗೊಳ್ಳುತ್ತದೆ. ಏಪ್ರಿಲ್ ಅಂತ್ಯ, ಮೇ ತಿಂಗಳುಗಳಲ್ಲಿ ಹತ್ತನೇ ತರಗತಿ, ಪಿಯುಸಿ ಹಾಗೂ ಸಿಇಟಿ ಪರೀಕ್ಷೆಗಳ ಫಲಿತಾಂಶಗಳು ಘೋಷಣೆಯಾಗುತ್ತವೆ. ಶೇಕಡ 100 ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳು ಅತ್ಯುತ್ತಮ ವಿದ್ಯಾರ್ಥಿಗಳೆಂದು, ಅದಕ್ಕಿಂತ ಸ್ವಲ್ಪ ಕಡಿಮೆ ಅಂಕ ಗಳಿಸಿದವರು ಬುದ್ಧಿವಂತರೆಂದು ಸುದ್ದಿಯಾಗುತ್ತಾರೆ. ಶೇ. 80–85 ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ಮಾತನಾಡಿಸುವವರೇ ಇಲ್ಲ. ಅದಕ್ಕಿಂತ ಕಡಿಮೆ ಅಂಕಗಳು ಯಾವುದಕ್ಕೂ ಪ್ರಯೋಜನ ಇಲ್ಲವೆಂದು ಸಮಾಜ ನಿರ್ಧರಿಸಿದಂತೆ ಕಾಣುತ್ತದೆ. ಶೇ. 99ರ ಅಥವಾ ನೂರರ ಆಸುಪಾಸು ಅಂಕಗಳನ್ನು ಗಳಿಸಿದವರನ್ನು ದೊಡ್ಡ ದೊಡ್ಡ ಪೋಸ್ಟರ್‌ಗಳನ್ನಾಗಿ ತಮ್ಮ ತಮ್ಮ ವಿದ್ಯಾಸಂಸ್ಥೆಗಳ ಎದುರು ಪ್ರದರ್ಶಿಸುತ್ತಿರುತ್ತಾರೆ. ಪತ್ರಿಕೆಗಳಲ್ಲಿ ಪುಟಗಟ್ಟಲೆ ಜಾಹೀರಾತು ಅವರದ್ದೇ. ವಿದ್ಯಾಸಂಸ್ಥೆಯವರಿಗೆ ಮರು ಶೈಕ್ಷಣಿಕ ವರ್ಷದಲ್ಲಿ ದಾಖಲಾತಿ ಹೆಚ್ಚು ಮಾಡಿ ಆ ಮೂಲಕ ತಮ್ಮ ಆದಾಯ ಹೆಚ್ಚಿಸಿಕೊಳ್ಳುವ ತವಕ.

ಪೋಷಕರಿಗೆ ಪತ್ರಿಕೆಗಳಲ್ಲಿ ತಮ್ಮ ಮಕ್ಕಳ ಫೋಟೊ ಪ್ರಕಟವಾಗಿ ಮೆರೆಯುವ ಹುಮ್ಮಸ್ಸು. ವಾಟ್ಸ್‌ಆ್ಯಪ್ ಸ್ಟೇಟಸ್, ಫೇಸ್‌ಬುಕ್ ಇತ್ಯಾದಿಗಳಲ್ಲಿ ಅದೇ ಅದೇ. ಈ ನಡುವೆ ಸಾಮಾನ್ಯ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳ ಪಾಡೇನು? ಅವರು ಎದುರಿಸುವ ಹತಾಶ ಸ್ಥಿತಿಗಳೇನು? ಯಾರೂ ಕೂಡ ಯೋಚಿಸುವುದಿಲ್ಲ.

## ಪೋಷಕರು ಸೃಷ್ಟಿಸುವ ಅನಗತ್ಯ ಒತ್ತಡ

ಪ್ರಸ್ತುತ ತಂದೆ ತಾಯಂದಿರಿಗೆ ತಮ್ಮ ಮಕ್ಕಳು ಡಾಕ್ಟರ್, ಎಂಜಿನಿಯರ್, ಸಿಎ ಇತ್ಯಾದಿ ಪದವಿಗಳನ್ನು ಹೊಂದಬೇಕು. ದೇಶದಲ್ಲಿ ದೊಡ್ಡ ಕಂಪನಿಯಲ್ಲಿ ಅಥವಾ ದೊಡ್ಡ ಹುದ್ದೆಯಲ್ಲಿ ಇರಬೇಕು. ವಿದೇಶಕ್ಕೆ ಹೋದರೆ ಇನ್ನೂ ಉತ್ತಮ, ಇತ್ಯಾದಿ ಕನಸುಗಳು ಇರುತ್ತವೆ. ಅದು ತಪ್ಪು ಎಂದು ಹೇಳಲಾಗದು. ಆದರೆ, ಪ್ರತಿಯೊಂದು ಮಗುವು ಕೂಡ ಭಿನ್ನ ಎಂದು ಬಹಳಷ್ಟು ಪೋಷಕರು ಯೋಚಿಸುವುದಿಲ್ಲ.

ಕೆಲವು ವರ್ಷಗಳ ಹಿಂದೆ ಏಪ್ರಿಲ್ ಮೊದಲ ವಾರದಂದು ನಾನು ಮನೆಯ ಕಡೆ ನಡೆದುಕೊಂಡು ಹೋಗುತ್ತಿದ್ದಾಗ ನನ್ನ ಮುಂದೆ ತಾಯಿ ಒಬ್ಬಳು ತನ್ನ ಪುಟ್ಟ ಮಗುವಿನ ಕೈ ಹಿಡಿದುಕೊಂಡು ಹೋಗುತ್ತಿದ್ದಳು. ನಮಗೂ ತನ್ನ ಪ್ರೋಗ್ರೆಸ್ ಕಾರ್ಡನ್ನು ಅಮ್ಮನ ಕೈಗೆ ಕೊಟ್ಟಿತ್ತು. ಅದು ಸೀನಿಯರ್ ಕೆಜಿಯಲ್ಲಿ ಓದುತ್ತಿತ್ತು. ಯಾವುದೋ ಒಂದೆರಡು ವಿಷಯದಲ್ಲಿ 'ಬಿ ಪ್ಲಸ್' ಬಂದಿತ್ತು. ಅಷ್ಟಕ್ಕೆ ಕೆಂಡಾಮಂಡಲಳಾದ ಆ ತಾಯಿ ರಸ್ತೆಯಲ್ಲಿ ಹಿಗ್ಗಾಮುಗ್ಗಾ ಬಾರಿಸಲು ಪ್ರಾರಂಭಿಸಿದಳು. ಆ ಮಗುವಿಗೆ ವಿದ್ಯೆಯ ಬಗ್ಗೆ ಜಿಗುಪ್ಸೆ ಮೂಡಲು ಇದೇ ಸಾಕು. ನಾನು ಸಮಾಧಾನವಾಗಿ ವರ್ತಿಸುವಂತೆ ತಾಯಿಗೆ ಹೇಳಿದೆ. ಆಕೆ ಕೇಳುವ ಸ್ಥಿತಿಯಲ್ಲಿ ಇರಲಿಲ್ಲ.

ಶಾಲೆಗಳ ದಾಖಲಾತಿಯ ಸಂದರ್ಭದಲ್ಲಿ ಎಷ್ಟೋ ಪೋಷಕರು ಐದನೇ ತರಗತಿಯಿಂದ ಈ ಶಾಲೆಯಲ್ಲಿ ಐಐಟಿಗೆ ತರಬೇತಿ ಇದೆಯಾ? ಪಿಯುಸಿ, ಸಿಇಟಿಗೆ ಏಳನೇ ತರಗತಿಯಿಂದಲೇ ಕೋಚಿಂಗ್ ಕೊಡಲು ಪ್ರಾರಂಭಿಸುತ್ತೀರಾ? ನೀಟ್ ಪರೀಕ್ಷೆಗೆ ಹೈಸ್ಕೂಲಿನಲ್ಲಿಯೇ ತರಬೇತಿ ಕೊಡುತ್ತೀರಾ? ಎಂದೆಲ್ಲ ಕೇಳುವುದನ್ನು ನಾನು ಗಮನಿಸಿದ್ದೇನೆ. ಇದು ಕಳೆದ ಸುಮಾರು 10–15 ವರ್ಷಗಳಲ್ಲಿ ವಿಪರೀತ ಎನ್ನುವ ಮಟ್ಟಕ್ಕೆ ಮುಟ್ಟಿದೆ. ಒಮ್ಮೆ ಏಳನೇ ಕ್ಲಾಸಿಗೆ ಬಂದರೆ ಸಾಕು, ವಿದ್ಯಾರ್ಥಿಗಳಿಗೆ ಪಿಯುಸಿ ಮುಗಿಯುವಲ್ಲಿಯವರೆಗೆ ವಿಶ್ರಾಂತಿ ಎನ್ನುವುದೇ ಇಲ್ಲ. ಓದು ಓದು ಓದು ಎನ್ನುತ್ತಲೇ ಪೋಷಕರು ತಮ್ಮ ಮಕ್ಕಳಿಗೆ ಒತ್ತಡ ಹಾಕುತ್ತಿರುತ್ತಾರೆ.

ಹಾಗಿದ್ದರೆ ಮಕ್ಕಳ ಬಗ್ಗೆ ಕಾಳಜಿ ಬೇಡವೇ ಎಂದು ಪ್ರಶ್ನಿಸಬಹುದು. ಕಾಳಜಿ ಬೇಕು. ತಮ್ಮ ಮಗಳು, ಮಗನ ಸಾಮರ್ಥ್ಯ ಎಲ್ಲಿದೆ? ಅವರು ಏನನ್ನು ಓದಿಕೊಳ್ಳಬಲ್ಲರು? ಅವರ ಗ್ರಹಿಕೆಯ ಮಟ್ಟ ಯಾವುದು? ಇತ್ಯಾದಿ ತಿಳಿದುಕೊಂಡು ಆ ಮೂಲಕ ತಮ್ಮ ಮಕ್ಕಳನ್ನು ಸಿದ್ಧಗೊಳಿಸಿದರೆ ಅವರಿಗೆ ಹೆಚ್ಚು ಉಪಯುಕ್ತ.

## ಅನಗತ್ಯ ಘನತೆಯ ವಿಚಾರಗಳು

'ನಮ್ಮ ಕುಟುಂಬದಲ್ಲಿ ಎಲ್ಲರೂ ಡಾಕ್ಟರೇ ಆಗಿದ್ದಾರೆ. ನೀನು ಕೂಡ ಆಗಬೇಕು'. 'ಪಕ್ಕದ ಮನೆಯವರು ಫಸ್ಟ್ ರ‍್ಯಾಂಕ್ ಬಂದಿದ್ದಾರೆ. ನೀನೂ ತೆಗೆಯಬೇಕು'. 'ನಮ್ಮ ಕುಟುಂಬದಲ್ಲಿ ಎಲ್ಲರೂ ವಿದೇಶಕ್ಕೆ ಹೋಗಿದ್ದಾರೆ. ನೀನೂ ಹೋಗಬೇಕು. ಇಲ್ಲದಿದ್ದರೆ ನಮ್ಮ ಘನತೆಗೆ ಕುಂದು' ಎನ್ನುವಂತಹ ಹುಸಿ ಘನತೆಯ ಮಾತುಗಳನ್ನು ಎಲ್ಲ ಕಡೆ ಕೇಳಬಹುದು.

'ನಾನು ಇಷ್ಟು ಖರ್ಚು ಮಾಡಿ ಓದಿಸಿ ಏನು ಪ್ರಯೋಜನ ಆಯಿತು? ನೀನು ತೆಗೆದದ್ದು ಕೇವಲ 90 ಅಂಕ' ಎಂದು ಹೀನಾಯವಾಗಿ ನಿಂದಿಸುವವರನ್ನೂ ನಾನು ನೋಡಿದ್ದೇನೆ.